## 33 ಒಳ್ಳೆಯ ಸಂಖ್ಯೆ

ರಜೆಯಲ್ಲಿ ಬಂದಿದ್ದ ನಮ್ಮ ನಾದಿನಿಯ ಮಗ ಚಿನ್ಮಯನಿಗೆ, ಮನೆಯ ಮುಂದಿರುವ ಬಳ್ಳಿಯಿಂದ 33 ವೀಳ್ಯದೆಲೆ ಕಿತ್ತುಕೊಂಡು ಬರಲು ಹೇಳಿ ನಾನು ರಂಗೋಲಿ ಬರೆಯಲು ಕುಳಿತೆ. ವೀಳ್ಯದೆಲೆ ಕಿತ್ತು ತಂದ ಚಿನ್ಮಯ. 'ರಂಗೋಲಿಯಲ್ಲಿ 33 ಪದ್ಮಗಳು ಇವೆಯಾ ಎಣಿಸು' ಅಂದೆ. 'ಅದೇನು? ಎಲ್ಲಾ 33 ಇರಬೇಕಾ?' ಎಂದ. 'ಈಗ ಅಧಿಕ ಜೇಷ್ಠ ಮಾಸ. ಏನು ಮಾಡಿದರೂ 33 ಮಾಡಬೇಕು' ಎಂದೆ. ನಂತರ ತಿಂಡಿಗೆ ಪೂರಿ ಮಾಡಿ ಬಡಿಸುತ್ತಿದ್ದೆ. ಹನ್ನೆರಡು ಪೂರಿ ತಿಂದರೂ ಏಳಲೊಲ್ಲ.

'ಇದೇನೋ ಇವತ್ತು ಇಷ್ಟು ಹಸಿವು ನಿಂಗೆ' ಅಂತ ಕೇಳಿದೆ. 'ಹೊಟ್ಟೆ ಆಗ್ಲೇ ತುಂಬಿದೆ. ಅಧಿಕ ಮಾಸದಲ್ಲಿ 33 ಒಳ್ಳೆ ಸಂಖ್ಯೆ ಅಂದ್ರಲ್ಲಾ, ಅದಕ್ಕೆ' ಎನ್ನುವುದೇ ಭೂಪ!

**ಬಿ.ಎಸ್. ರಾಜಲಕ್ಷ್ಮಿ**





## 'ಕ್ಯಾರೇಟ್'

ಬೇಸಿಗೆ ರಜೆಯಲ್ಲಿ ನಮ್ಮನೆಗೆ ಬಂದಿದ್ದ ನನ್ನ ತಂಗಿ ಮಗ ಶ್ರೀನಿಧಿ. ವಾರದ ಸಂತೆಗೆಂದು ನನ್ನ ಪತಿಯ ಜೊತೆಗೆ ತರಕಾರಿ ತರಲು ಹೋಗಿದ್ದ. ತರಕಾರಿ ತೆಗೆದುಕೊಂಡು ಬಂದಾಗ ನೇರವಾಗಿ ನಮ್ಮಲ್ಲಿಗೆ ಬಂದು, 'ದೊಡ್ಡಮ್ಮ, ಈ ದೊಡ್ಡಪ್ಪನಿಗೆ ತರಕಾರಿನೇ ಗೊತ್ತಾಗಲ್ಲ. ಬದನೆಕಾಯಿ, ಹೀರೆಕಾಯಿ, ಬೆಂಡೆ–ತೊಂಡೆ... ಎಲ್ಲದಕ್ಕೂ 'ಕ್ಯಾರೇಟ್' ಅನ್ನುತ್ತಾರೆ' ಎಂದ. 'ಹೌದೇನ್ರಿ?' ಎಂದು ಕೇಳಿದೆ. 'ಅದು ಹಾಗಲ್ಲ ಕಣೆ, ಸಾಬರ (ಮುಸ್ಲಿಂ) ಜೊತೆಗೆ ಮಾತಾಡುವಾಗ ಆಯಾ ತರಕಾರಿ ಹಿಡಿದು 'ಕ್ಯಾ ರೇಟ್' (ಬೆಲೆ ಎಷ್ಟು) ಅಂತ ಕೇಳಿದೆ. ಅದನ್ನ ಇವನು ಹೀಗೆ ಅರ್ಥ ಮಾಡ್ಕೊಂಡಿದ್ದಾನೆ' ಎಂದರು.

**ಪೂರ್ಣಿಮಾ ಗುರುದೇವ ಭಂಡಾರ್ಕರ್**